# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-10032/2018/ಡಿ.ಆರ್.ಇ-2 ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 14/10/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಜನಾರ್ಧನ್ ಪೂಜಾರಿ ಇವರಿಗೆ ಶ್ರೀಮತಿ ಜಾನಕಿ ರವರ ಹಿತ್ತಲಿನಲ್ಲಿ ಬೆಳೆದ ತೆಂಗಿನ ಮರಗಳಿಂದ ಅಪಾಯ ಉಂಟಾಗುತ್ತಿದ್ದು, ಅಂತಹ ಯಾವುದೇ ತೆಂಗಿನ ಮರ ಇದ್ದರೆ ಅವುಗಳನ್ನು ಕಾನೂನು ರೀತ್ಯಾ ತೆಗೆಯಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಜನಾರ್ಧನ ಪೂಜಾರಿ ಬಿನ್ ಜಾರಪ್ಪ ಪೂಜಾರಿ, ದಂಡೆಗೋಳಿ ಮನೆ, ಬುಡೋಳಿ ಗ್ರಾಮ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀಮತಿ ವೇದಾ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಂಜಿಕಲ್ಲು ಗ್ರಾಮ ಪಂಚಾಯತ್, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಮತ್ತು, (2) ಶ್ರೀಮತಿ ಜಾನಕಿ ಕೋಂ ಅಂತಪ್ಪ ಪೂಜಾರಿ, ದಂಡೆಗೋಳಿ ಮನೆ, ಬುಡೋಳಿ ಗ್ರಾಮ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಬಂಟ್ವಾಳ ತಾಲ್ಲೂಕು ಬುಡೋಳಿ ಗ್ರಾಮದ ದಂಡೇಗೋಳಿ ಎಂಬಲ್ಲಿ ದೂರುದಾರರು ಮನೆ ಕಟ್ಟಿಕೊಂಡು ವಾಸಿಸುತ್ತಿದ್ದು, ದೂರುದಾರರ ಮನೆಯ ಪಕ್ಕದಲ್ಲಿ 2ನೇ ಎದುರುದಾರರ ಹಿತ್ತಲಲ್ಲಿರುವ ತೆಂಗಿನ ಮರಗಳು ದೂರುದಾರರ ಆವರಣದಲ್ಲಿ ಬಾಗಿ, ತೆಂಗಿನಗರಿ, ತೆಂಗಿನಕಾಯಿ, ದೂರುದಾರರ ಮನೆಯ ಮೇಲೆ ಬಿದ್ದು, ಮನೆಯ ಛಾವಣಿ ಹಾಳಾಗುತ್ತಿದೆ. ಸದರಿ

ತೆಂಗಿನ ಮರಗಳನ್ನು ತೆಗೆಸಲು ಪಂಜಿಕಲ್ಲು ಗ್ರಾಮ ಪಂಚಾಯತಿಗೆ ದೂರು ನೀಡಿದರೂ, 1ನೇ ಎದುರುದಾರರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ತೆಂಗಿನ ಮರಗಳನ್ನು ತೆಗೆಸುವಂತೆ ಎದುರುದಾರರಿಗೆ ನಿರ್ದೇಶಿಸಲು ಕೋರಿರುತ್ತಾರೆ.

3. ಎದುರುದಾರರು ದಿನಾಂಕ: 20/02/2019ರ ತಮ್ಮ ಆಕ್ಷೇಪಣೆಯಲ್ಲಿ 2ನೇ ಎದುರುದಾರರಾದ ಶ್ರೀಮತಿ ಜಾನಕಿಯವರಿಗೆ ದಿನಾಂಕ: 04/07/2018 ರಂದು ನೋಟಿಸು ನೀಡಿ ಅಪಾಯಕಾರಿ ತೆಂಗಿನಮರ ತೆರವುಗೊಳಿಸಲು ಆದೇಶಿಸಿದ್ದು, ಅದರಂತೆ ಶ್ರೀಮತಿ ಜಾನಕಿ ತಮ್ಮ ಜಾಗದಲ್ಲಿ ವಾಲಿಕೊಂಡಿದ್ದ ಅಪಾಯಕಾರಿ ತೆಂಗಿನಮರವನ್ನು ಕಡಿದು ತೆರವುಗೊಳಿಸಿರುತ್ತಾರೆ. ಈ ಬಗ್ಗೆ ಫೋಟೋಗಳ ಪ್ರತಿಗಳನ್ನು ಹಾಜರುಪಡಿಸಿದ್ದು, ಸದರಿ ಫೋಟೋದಲ್ಲಿ ಒಂದು ಮರ ಕಡಿದಿರುವುದು ಕಂಡುಬರುತ್ತದೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ದೂರುದಾರರು ಅಲ್ಲಗಳೆದು ತಮ್ಮ ಮನೆಯ ಮೇಲೆ ವಾಲಿರುವ ಎರಡು ತೆಂಗಿನ ಮರ ಹಾಗೆಯೇ ಇರುತ್ತದೆಂದು ಎರಡು ಮರಗಳ ಫೋಟೋಗಳನ್ನು ಹಾಜರುಪಡಿಸಿದ್ದರು. ಆದ್ದರಿಂದ, ಈ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರಿಗೆ ಮಾನ್ಯರವರ ಅದೇಶದಂತೆ ನಿರ್ದೇಶಿಸಲಾಗಿತ್ತು.

5. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರು ಸ್ಥಳ ತನಿಖೆ ಮಾಡಿ ಅದರಲ್ಲಿ, ಜನಾರ್ಧನ್ ಪೂಜಾರಿ ರವರು ಸುಮಾರು 5 ವರ್ಷಗಳ ಹಿಂದೆ ದೂರು ಅರ್ಜಿ ನೀಡಿದ್ದು, ಈ ಬಗ್ಗೆ ಅಂದಿನ ಅಭಿವೃದ್ಧಿ ಅಧಿಕಾರಿಯವರ ಪತ್ರ ಸಂಖ್ಯೆ: 44/2014-15, ದಿನಾಂಕ: 25/07/2014 ರಂದು ಹಿಂಬರಹ ನೀಡಿರುತ್ತಾರೆ. ತದನಂತರ, ಶ್ರೀ ಜನಾರ್ಧನ್ ಪೂಜಾರಿ ರವರು ಅಂದರೆ ಈ ದೂರುದಾರರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬಂಟ್ವಾಳ್ ಇವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶ ಸಂಖ್ಯೆ: ತಾ.ಪಂ.ಬಂ/ಅಪೀಲು/05/2015, ದಿನಾಂಕ: 16/12/2017 ರಂತೆ ಮನೆಗೆ ಅಪಾಯಕಾರಿಯಾಗಿ ಬಾಗಿಕೊಂಡು ಹಾನಿ ಉಂಟು ಮಾಡುತ್ತಿರುವ ಶ್ರೀಮತಿ ಜಾನಕಿ ಇವರಿಗೆ ತೆಂಗಿನ ಮರಗಳನ್ನು ತೆಗೆಯಲು ಕ್ರಯ ಕೈಗೊಳ್ಳಬೇಕೆಂದು ಆದೇಶಿಸಿರುತ್ತಾರೆ. ಈ ಬಗ್ಗೆ ಶ್ರೀಮತಿ ಜಾನಕಿ ಇವರಿಗೆ ದಿನಾಂಕ: 05/03/2018 ರಂದು ನೋಟಿಸ್ ನೀಡಿ, ಸೂಕ್ತ ರಕ್ಷಣಾ ವ್ಯವಸ್ಥೆ ಮಾಡಿಕೊಂಡು ದಿನಾಂಕ:

17/07/2019 ರಂದು ಪೋಲೀಸ್ ಇಲಾಖೆಯವರ ಸಮಕ್ಷಮ ಸದರಿ ಮರಗಳನ್ನು ಕಡಿದು ತೆರೆವುಗೊಳಿಸಲಾಗಿರುತ್ತದೆಂದು ಉಲ್ಲೇಖವಾಗಿದೆ.

6. ಈ ಎಲ್ಲಾ ಅಂಶಗಳನ್ನು ನೋಡಲಾಗಿ, ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶ ಸಂಖ್ಯೆ: ತಾ.ಪಂ.ಬಂ/ಅಪೀಲು/05/2015, ದಿನಾಂಕ: 16/12/2017 ರಂತೆ ಎದುರುದಾರರು ಕೂಡಲೇ ಅಪಾಯಕಾರಿಯಾಗಿದ್ದ ತೆಂಗಿನ ಮರಗಳನ್ನು ತೆಗೆಯದೇ ಕರ್ತವ್ಯ ನಿರ್ಲಕ್ಷ್ಯಸಿದ್ದರು ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರು ಈ ದೂರು ದಾಖಲಿಸಿದ ನಂತರ ಎದುರುದಾರರು ಶ್ರೀಮತಿ ಜಾನಕಿ ರವರ ಹಿತ್ತಲಲ್ಲಿ ಬೆಳೆದಿದ್ದ ಮತ್ತು ದೂರುದಾರರಿಗೆ ಅಪಾಯವನ್ನು ಉಂಟು ಮಾಡುತ್ತಿದ್ದ ಎಲ್ಲಾ ತೆಂಗಿನ ಮರಗಳನ್ನು ತೆಗೆಯದೇ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರಿಗೆ ತನಿಖೆಗೆ ಕಳುಹಿಸಿದಾಗ, ತೆರೆವುಗೊಳಿಸಿದ್ದನ್ನು ನೋಡಲಾಗಿ, ಎದುರುದಾರರು ಎಲ್ಲಾ ತೆಂಗಿನ ಮರಗಳನ್ನು ತೆಗೆಯದೇ ಅಪಾಯಕಾರಿ ತೆಂಗಿನ ಮರಗಳನ್ನು ತೆಗೆಯಲಾಗಿದೆ ಎಂದು ವರದಿ ಸಲ್ಲಿಸಿದ್ದರು.

7. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಶ್ರೀ ಜನಾರ್ಧನ್ ಪೂಜಾರಿ ಇವರಿಗೆ ಶ್ರೀಮತಿ ಜಾನಕಿ ರವರ ಹಿತ್ತಲಿನಲ್ಲಿ ಬೆಳೆದ ತೆಂಗಿನ ಮರಗಳಿಂದ ಅಪಾಯ ಉಂಟಾಗುತ್ತಿದ್ದು, ಅಂತಹ ಯಾವುದೇ ತೆಂಗಿನ ಮರ ಇದ್ದರೆ ಅವುಗಳನ್ನು ಕಾನೂನು ರೀತ್ಯಾ ತೆಗೆಯಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand
4/10

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**